International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

# ಮರೆಯಲಾಗದ ಮೈಸೂರು ದೊರೆಯ ಸ್ಮರಿಸುತ್ತಾ .......

**ಡಾ. ಮಾದಯ್ಯ ಮಾಕನಹಳ್ಳಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕೆ.ಆರ್. ನಗರ

ಕರ್ನಾಟಕ ರಾಜ್ಯದ ಸರ್ವತೋಮುಖ ಪ್ರಗತಿಗೆ, ಸರ್ವರಿಗೂ ಸಮಾನ ಅವಕಾಶ–ಸಮಾನ ಬದುಕು ದೊರೆಯಬೇಕೆಂದು ಆಶಿಸಿ, ಅಪಾರ ಕೊಡುಗೆಯನ್ನಿತ್ತು ವಿಶಿಷ್ಟ ಸ್ಥಾನಮಾನವನ್ನು ಪಡೆದ ಮೈಸೂರು ಸಂಸ್ಥಾನದ ಮಹಾರಾಜರುಗಳಲ್ಲಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರದೊಂದು ಅಪರೂಪದ ಹೆಸರು, ಹತ್ತನೆಯ ಚಾಮರಾಜ ಒಡೆಯರ್ ಹಾಗೂ 'ವಾಣಿವಿಲಾಸ ಸನ್ನಿಧಾನ' ಎಂದೇ, ಹೆಸರುವಾಸಿಕೆಯಾಗಿದ್ದ ಕೆಂಪುನಂಜಮ್ಮಣ್ಣಿ ಈ ದಂಪತಿಗಳ ಸುಪುತ್ರನಾಗಿ: ಜುಲೈ 4, 1884ರಲ್ಲಿ ಕೃಷ್ಣರಾಜರು ಜನಿಸಿದರು. ಜಯಲಕ್ಷ್ಮಮ್ಮಣ್ಣಿ, ಕೃಷ್ಣಾಜಮ್ಮಣ್ಣಿ, ಚಲುವಾಜಮ್ಮಣ್ಣಿಯವರು ಹಾಗೂ ಶ್ರೀ ಕಂಠೀರವ ನರಸಿಂಹರಾಜ ಒಡೆಯರು, ಕೃಷ್ಣರಾಜ ಒಡೆಯರೊಂದಿಗೆ ಹುಟ್ಟಿದ ಸಹೋದರಿ–ಸಹೋದರರಾಗಿದ್ದಾರೆ. ಕೃಷ್ಣರಾಜರು ತಮಗೆ 16 ವರ್ಷ ವಯೋಮಾನದವರಾಗಿರುವಾಗಲೆ, ಕಾಥೇವಾಡ ಸಂಸ್ಥಾನದ ರಾಜವಂಶದ ರಾಣಾ ಶ್ರೀ ವಿನಯಸಿಂಹರ ಪುತ್ರಿ ಪ್ರತಾಪಕುಮಾರಿದೇವಿಯೊಡನೆ ಜೂನ್ 06, 1900ರಂದು ವೈವಾಹಿಕ ಬದುಕಿಗೆ ಪಾದಾರ್ಪಣೆ ಮಾಡುತ್ತಾರೆ. ಜಗನ್ಮೋಹನ ಅರಮನೆಯಲ್ಲಿ ಸಡಗರ–ಸಂಭ್ರಮದಿಂದ ಅದ್ದೂರಿಯಾಗಿ ನಡೆದ ಈ ಮದುವೆ, ಇತಿಹಾಸದ ಪುಟದಲ್ಲಿ ಮಹತ್ವ ಪಡೆದಿದೆ.

ಚಿಕ್ಕಂದಿನಲ್ಲಿಯೆ ಕೃಷ್ಣರಾಜರು ಸೂಕ್ಷ್ಮಬುದ್ಧಿ, ಆಲೋಚನಾಪರ ದೂರದೃಷ್ಟಿತ್ವವನ್ನು ಮೈಗೂಡಿಸಿಕೊಂಡು ಬೆಳೆದವರು. ಮಹಾರಾಜರ ಮಗನಾಗಿದ್ದರೂ ಸಹ ಯಾವುದೇ ಹಮ್ಮು ಬಿಮ್ಮಿಗೂ ಒಳಗಾಗದೆ, ಸಾಮಾನ್ಯ ಜನಸಮುದಾಯದವರ ಬಗೆಗೆ ವಿಶೇಷ ಕಾಳಜಿ–ಕನಿಕರ ಮಮತೆಯನ್ನಿರಿಸಿಕೊಂಡಿದ್ದವರು. ಸಚ್ಚಾರಿತ್ರ, ಸಂಯಮಶೀಲ ಮನೋಧರ್ಮ, ಸಮಾನತೆ, ಸಮಾನಪ್ರೇಮ, ದಯೆ, ಅನುಕಂಪಗಳ ಗಣಿಯಾಗಿದ್ದರು ಎಂದರೂ ಕೂಡ; ಅತಿಶೋಕ್ತಿಯಲ್ಲ. ವಿದ್ಯೆ ಕಲಿಯುವುದರಲ್ಲಿ ಪ್ರೌಢಿಮೆಯನ್ನು, ಸಾಹಿತ್ಯ–ಸಂಗೀತದಲ್ಲಿ ಆಸಕ್ತಿ ಅಭಿರುಚಿಯನ್ನಿರಿಸಿಕೊಂಡು, ರಾಜವಂಶಸ್ಥರಿಗೆ: ಬಾಲ್ಯದಲ್ಲಿಯೆ ಘನತೆಯನ್ನು ತಂದುಕೊಟ್ಟವರು. ಕೃಷ್ಣರಾಜರಿಗೆ ಹತ್ತು ವರ್ಷದ ಪ್ರಾಯ. ಆ ಹೊತ್ತಿನಲ್ಲಿ ಕಲ್ಕತ್ತಾದ ಕಡೆಗೆ ಪ್ರವಾಸ ಕೈಗೊಂಡಿದ್ದ ಹತ್ತನೆಯ ಚಾಮರಾಜ ಒಡೆಯರ್ ಡಿಸೆಂಬರ್ 28, 1894ರಂದು. 'ಡಿಫ್ತಿರಿಯಾ' ಎಂಬ ರೋಗಕ್ಕೆ ತುತ್ತಾಗಿ ಅಲ್ಲಿಯೆ ನಿಧನ ಹೊಂದುತ್ತಾರೆ. ತಂದೆಯವರು ತೀರಿಕೊಂಡ ದುರ್ಘಟನೆ ಎಳೆಯ ಮನಸ್ಸಿನವರಾದ ಕೃಷ್ಣರಾಜರಿಗೆ ಬರಸಿಡಿಲು ಎರಗಿದಂತಾಗುತ್ತದೆ. ಮುಂದೆ ಫೆಬ್ರವರಿ 1895ರಂದು ಇವರಿಗೆ ಪಟ್ಟಾಭಿಷೇಕವಾಗುತ್ತದೆ. ಕೃಷ್ಣರಾಜರಿಗೆ 18

International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

ವರ್ಷ ತುಂಬುವವರೆಗೂ, ಮಹಾರಾಣಿಯವರಾದ ಕೃಷ್ಣರಾಜ ಒಡೆಯರ್‌ರ ಮಾತೆಯಾದ ಕೆಂಪುನಂಜಮ್ಮಣ್ಣಿಯವರು 'ರಾಜಪ್ರತಿನಿಧಿ'ಯಾಗಿ, ಮೈಸೂರು ಸಾಮ್ರಾಜ್ಯವನ್ನು ಮುನ್ನಡೆಸಿ, ಅನೇಕ ಜನೋಪಯೋಗಿ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. 1902ರಲ್ಲಿ ಕೃಷ್ಣರಾಜರು ಮೈಸೂರು ಸಂಸ್ಥಾನದ ಮಹಾರಾಜರಾಗಿ, ರಾಜ್ಯಾಭಿಷೇಕವಾಗಿ ಬಡವರು, ಶೋಷಿತರು, ದೀನ ದಲಿತರು, ಹಿಂದುಳಿದವರು; ಅಷ್ಟೇಕೆ ಈ ನಾಡಿನ ಎಲ್ಲ ಕೋಮು–ಧರ್ಮದ ತಬ್ಬಲಿ ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ದಯಪಾಲಿಸಿ, ಇವರೆಲ್ಲರ ನೊಂದ ಬಾಳಿಗೆ, ಬೆಳಕಾದವರು. ನಾಲ್ವಡಿ ಕೃಷ್ಣರಾಜ ಒಡೆಯರ್ (1902–1940) ಅವರು, ಸುಮಾರು 38 ವರ್ಷಗಳ ಕಾಲ ಮೈಸೂರು ಸಾಮ್ರಾಜ್ಯವನ್ನು ಆಳ್ವಿಕೆ ಮಾಡಿದರು. ಈ ಕಾಲದಲ್ಲಿ ಮೈಸೂರು ರಾಜ್ಯ ಅನೇಕ ಹೆಜ್ಜೆ ಗುರುತುಗಳನ್ನು, ವಿವಿಧ ರಂಗಗಳಲ್ಲಿ ಸ್ಥಾಪಿಸಿಕೊಂಡಿತು. ಇವರ ದೂರದೃಷ್ಟಿತ್ವದ ಶ್ರಮದ ಫಲವಾಗಿ ಈ ನಾಡು ಅನೇಕ ಬಗೆಯಲ್ಲಿ ಪ್ರಗತಿಯನ್ನು ಕಂಡಿತು. ಪ್ರಜೆಗಳ ಸೇವಾ ಕಲ್ಯಾಣವೆ ನನ್ನ ಪರಮಗುರಿ ಎಂದು ಬಯಸಿದವರಾಗಿದ್ದರು ನಾಲ್ವಡಿ ಕೃಷ್ಣರಾಜ ಒಡೆಯರು. ತಾಳ್ಮೆ, ಸಹನೆ, ಧೈರ್ಯ ಇವರಿಗೆ ಚಿಕ್ಕಂದಿನಿಂದಲೂ ಬಳುವಳಿಯಾಗಿ ಬಂದಿದ್ದ ವಿಶೇಷ ಗುಣಗಳು. "ಪ್ರಜೆಗಳ ಸುಖವೇ ತನ್ನ ಸುಖ. ಪ್ರಜೆಗಳ ಹಿತವೆ ನನ್ನ ಹಿತ. ತನ್ನ ಹಿತಕ್ಕಿಂತ ಪ್ರಜೆಗಳ ಹಿತವೇ ಮುಖ್ಯ ಗುರಿ ಎಂಬ ಮಾತಿಗೆ ಭೂಷಣಪ್ರಾಯವಾಗಿ ಸುಭಿಕ್ಷ ಮತ್ತು ಶಿಸ್ತಿನ ರಾಜ್ಯಭಾರ ನಡೆಸಿದ ಕೀರ್ತಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ.

ನಾಲ್ವಡಿ ಕೃಷ್ಣರಾಜ ಒಡೆಯರು, ಮಹಾರಾಜರಾಗಿ ಆಳ್ವಿಕೆ ನಡೆಸಿದ ಸಂದರ್ಭದಲ್ಲಿ ಅನೇಕ ಜನೋಪಯೋಗಿ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡರು. ಅವರು ಮಾಡಿದ ಪ್ರಮುಖ ಕಾರ್ಯ ಯೋಜನೆಗಳನಷ್ಟೇ ಆಸಕ್ತ ಓದುಗರ ಪುಟ್ಟ ಮಾಹಿತಿಗಾಗಿ ಉಲ್ಲೇಖಿಸುವುದು ಸೂಕ್ತ. ಏಷ್ಯಾ ಖಂಡದಲ್ಲಿಯೇ ಮೊಟ್ಟಮೊದಲ ಬಾರಿಗೆ ಜಲವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪನೆಯಾದದ್ದು ಶಿವನಸಮುದ್ರದಲ್ಲಿ ಜೂನ್ 30, 1902 ರಂದು. ಇದಕ್ಕೆ ಪ್ರಮುಖ ಕಾರಣರಾದವರು ಶ್ರೀ ನಾಲ್ವಡಿ ಕೃಷ್ಣರಾಜರು. ಉದ್ಯಾನನಗರಿ ಎಲೆಕ್ಟ್ರಿಕ್ ಸಿಟಿ ಎಂದೇ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ಅಂದಿನ ಬೆಂಗಳೂರು ಆಗಸ್ಟ್ 03, 1905 ರಂದು ಹಾಗೂ ಸಾಂಸ್ಕೃತಿಕ ಅರಮನೆ ನಗರಿ ಎಂದು ಹೆಸರುಗಳಿಸಿರುವ ಮೈಸೂರಿಗೆ 1906 ರಂದು ಮೊದಲ ಬಾರಿಗೆ ವಿದ್ಯುತ್ ದೀಪಗಳನ್ನು ಅಳವಡಿಸುವ ಮೂಲಕ ಅಂದಿನ ಈ ಎರಡು ನಗರ–ಪಟ್ಟಣಗಳು ದೀಪದ ಬೆಳಕಿಂದ ಮಿನುಗಲು ಮುಖ್ಯ ಕಾರಣರಾದರು.

ನಾಲ್ವಡಿಯವರು ಮುಂದಾಲೋಚನೆ ಮತ್ತು ತಮ್ಮಲ್ಲಿದ್ದ ದೂರದರ್ಶಿತ್ವದ ಫಲವಾಗಿ ಪ್ರಜೆಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ನಿಟ್ಟಿನಲ್ಲಿ ಹಾಗೂ ಜನ ಸಮುದಾಯ ಪ್ರಗತಿಯ ಪಥದೆಡೆಗೆ ಮುಖ ಮಾಡಬೇಕೆಂಬುದು ನಾಲ್ವಡಿಯವರ ನಿತ್ಯದ ಆಸೆಯಾಗಿತ್ತು. ಆ ಉದ್ದೇಶಕ್ಕಾಗಿ ವಿದ್ಯುಚ್ಛಕ್ತಿ ಯೋಜನೆ, ಸಾರಿಗೆ

ವರ್ಷ ತುಂಬುವವರೆಗೂ, ಮಹಾರಾಣಿಯವರಾದ ಕೃಷ್ಣರಾಜ ಒಡೆಯರ್‌ರ ಮಾತೆಯಾದ ಕೆಂಪುನಂಜಮ್ಮಣ್ಣಿಯವರು 'ರಾಜಪ್ರತಿನಿಧಿ'ಯಾಗಿ, ಮೈಸೂರು ಸಾಮ್ರಾಜ್ಯವನ್ನು ಮುನ್ನಡೆಸಿ, ಅನೇಕ ಜನೋಪಯೋಗಿ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ. 1902ರಲ್ಲಿ ಕೃಷ್ಣರಾಜರು ಮೈಸೂರು ಸಂಸ್ಥಾನದ ಮಹಾರಾಜರಾಗಿ, ರಾಜ್ಯಾಭಿಷೇಕವಾಗಿ ಬಡವರು, ಶೋಷಿತರು, ದೀನ ದಲಿತರು, ಹಿಂದುಳಿದವರು; ಅಷ್ಟೇಕೆ ಈ ನಾಡಿನ ಎಲ್ಲ ಕೋಮು–ಧರ್ಮದ ತಬ್ಬಲಿ ಸಮುದಾಯಕ್ಕೆ ಸಾಮಾಜಿಕ ನ್ಯಾಯವನ್ನು ದಯಪಾಲಿಸಿ, ಇವರೆಲ್ಲರ ನೊಂದ ಬಾಳಿಗೆ, ಬೆಳಕಾದವರು. ನಾಲ್ವಡಿ ಕೃಷ್ಣರಾಜ ಒಡೆಯರ್ (1902–1940) ಅವರು, ಸುಮಾರು 38 ವರ್ಷಗಳ ಕಾಲ ಮೈಸೂರು ಸಾಮ್ರಾಜ್ಯವನ್ನು ಆಳ್ವಿಕೆ ಮಾಡಿದರು. ಈ ಕಾಲದಲ್ಲಿ ಮೈಸೂರು ರಾಜ್ಯ ಅನೇಕ ಹೆಜ್ಜೆ ಗುರುತುಗಳನ್ನು, ವಿವಿಧ ರಂಗಗಳಲ್ಲಿ ಸ್ಥಾಪಿಸಿಕೊಂಡಿತು. ಇವರ ದೂರದೃಷ್ಟಿತ್ವದ ಶ್ರಮದ ಫಲವಾಗಿ ಈ ನಾಡು ಅನೇಕ ಬಗೆಯಲ್ಲಿ ಪ್ರಗತಿಯನ್ನು ಕಂಡಿತು. ಪ್ರಜೆಗಳ ಸೇವಾ ಕಲ್ಯಾಣವೆ ನನ್ನ ಪರಮಗುರಿ ಎಂದು ಬಯಸಿದವರಾಗಿದ್ದರು ನಾಲ್ವಡಿ ಕೃಷ್ಣರಾಜ ಒಡೆಯರು. ತಾಳ್ಮೆ, ಸಹನೆ, ಧೈರ್ಯ ಇವರಿಗೆ ಚಿಕ್ಕಂದಿನಿಂದಲೂ ಬಳುವಳಿಯಾಗಿ ಬಂದಿದ್ದ ವಿಶೇಷ ಗುಣಗಳು. ''ಪ್ರಜೆಗಳ ಸುಖವೇ ತನ್ನ ಸುಖ. ಪ್ರಜೆಗಳ ಹಿತವೆ ನನ್ನ ಹಿತ. ತನ್ನ ಹಿತಕ್ಕಿಂತ ಪ್ರಜೆಗಳ ಹಿತವೇ ಮುಖ್ಯ ಗುರಿ ಎಂಬ ಮಾತಿಗೆ ಭೂಷಣಪ್ರಾಯವಾಗಿ ಸುಭಿಕ್ಷ ಮತ್ತು ಶಿಸ್ತಿನ ರಾಜ್ಯಭಾರ ನಡೆಸಿದ ಕೀರ್ತಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ.

ನಾಲ್ವಡಿ ಕೃಷ್ಣರಾಜ ಒಡೆಯರು, ಮಹಾರಾಜರಾಗಿ ಆಳ್ವಿಕೆ ನಡೆಸಿದ ಸಂದರ್ಭದಲ್ಲಿ ಅನೇಕ ಜನೋಪಯೋಗಿ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡರು. ಅವರು ಮಾಡಿದ ಪ್ರಮುಖ ಕಾರ್ಯ ಯೋಜನೆಗಳನಷ್ಟೇ ಆಸಕ್ತ ಓದುಗರ ಪುಟ್ಟ ಮಾಹಿತಿಗಾಗಿ ಉಲ್ಲೇಖಿಸುವುದು ಸೂಕ್ತ. ಏಷ್ಯಾ ಖಂಡದಲ್ಲಿಯೇ ಮೊಟ್ಟಮೊದಲ ಬಾರಿಗೆ ಜಲವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪನೆಯಾದದ್ದು ಶಿವನಸಮುದ್ರದಲ್ಲಿ ಜೂನ್ 30, 1902 ರಂದು. ಇದಕ್ಕೆ ಪ್ರಮುಖ ಕಾರಣರಾದವರು ಶ್ರೀ ನಾಲ್ವಡಿ ಕೃಷ್ಣರಾಜರು. ಉದ್ಯಾನನಗರಿ ಎಲೆಕ್ಟ್ರಿಕ್ ಸಿಟಿ ಎಂದೇ ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿರುವ ಅಂದಿನ ಬೆಂಗಳೂರು ಆಗಸ್ಟ್ 03, 1905 ರಂದು ಹಾಗೂ ಸಾಂಸ್ಕೃತಿಕ ಅರಮನೆ ನಗರಿ ಎಂದು ಹೆಸರುಗಳಿಸಿರುವ ಮೈಸೂರಿಗೆ 1906 ರಂದು ಮೊದಲ ಬಾರಿಗೆ ವಿದ್ಯುತ್ ದೀಪಗಳನ್ನು ಅಳವಡಿಸುವ ಮೂಲಕ ಅಂದಿನ ಈ ಎರಡು ನಗರ–ಪಟ್ಟಣಗಳು ದೀಪದ ಬೆಳಕಿಂದ ಮಿನುಗಲು ಮುಖ್ಯ ಕಾರಣರಾದರು.

ನಾಲ್ವಡಿಯವರು ಮುಂದಾಲೋಚನೆ ಮತ್ತು ತಮ್ಮಲ್ಲಿದ್ದ ದೂರದರ್ಶಿತ್ವದ ಫಲವಾಗಿ ಪ್ರಜೆಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ನಿಟ್ಟಿನಲ್ಲಿ ಹಾಗೂ ಜನ ಸಮುದಾಯ ಪ್ರಗತಿಯ ಪಥದೆಡೆಗೆ ಮುಖ ಮಾಡಬೇಕೆಂಬುದು ನಾಲ್ವಡಿಯವರ ನಿತ್ಯದ ಆಸೆಯಾಗಿತ್ತು. ಆ ಉದ್ದೇಶಕ್ಕಾಗಿ ವಿದ್ಯುಚ್ಛಕ್ತಿ ಯೋಜನೆ, ಸಾರಿಗೆ

International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

ಸಂಪರ್ಕ, ವಾಣಿಜ್ಯ, ವ್ಯಾಪಾರ ಇವೆ ಮೊದಲಾದ ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡಿದರು. ಮಹಾರಾಜರ ಪ್ರಯತ್ನದ ಫಲವಾಗಿ ಯುವಕರಿಗೆ, ಮೆಕ್ಯಾನಿಕಲ್ ಇಂಜಿನಿಯರಿಂಗ್ ಸ್ಕೂಲನ್ನು ಸ್ಥಾಪಿಸಿದರು. ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಬೆಂಗಳೂರಿನಲ್ಲಿ ಸರ್ಕಾರಿ ಸಾಬೂನು ಕಾರ್ಖಾನೆ, ಗಂಧದ ಎಣ್ಣೆ ಕಾರ್ಖಾನೆ ಇವೆ ಮೊದಲಾದ ಕೈಗಾರಿಕಾ ರಂಗಕ್ಕೆ ಆದ್ಯತೆ ನೀಡಿದರು. ಕೃಷಿ ನೀರಾವರಿ, ರೈಲು ಸಾರಿಗೆ ಮೊದಲಾದ ಸಮಾಜಮುಖಿ ಕ್ಷೇತ್ರಗಳಿಗೆ ಆಸ್ಥೆವಹಿಸಿ, ಬಲು ಪಾರದರ್ಶಕವಾಗಿ ಇವುಗಳು ಅಭಿವೃದ್ಧಿ ಕಡೆಗೆ ಚಾಲನೆಯಾಗಲು ಬಹುಮುಖ್ಯ ಕಾರಣೀಭೂತರಾದರು. ಕೃಷಿಕರು ಅಧಿಕ ಸಾಲದ ಭರದಲ್ಲಿ ನಲುಗಿ ಹೋಗಬಾರದೆಂಬ ಕಾರಣಕ್ಕಾಗಿ ಇವರಿಗೆ 1918ರಲ್ಲಿ ಗ್ರಾಮ ಪಂಚಾಯ್ತಿಗಳ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರು. 1894ರಲ್ಲಿ ರೈತರ ಅನುಕೂಲಕ್ಕಾಗಿ ಸ್ಥಾಪನೆಯಾಗಿದ್ದ ಕೃಷಿ ಬ್ಯಾಂಕುಗಳಿಗೆ ವಿಶೇಷ ಕಾಯಕಲ್ಪ ನೀಡಿದರು. ಇದರ ಜೊತೆಗೆ 1905ರಲ್ಲಿ ರೈತರಿಗೆ ಅನುಕೂಲಕರವಾದ ಸೌಲಭ್ಯ ಒದಗಿಸಲು ಸಹಕಾರ ಸೊಸೈಟಿಗಳ ಜಾರಿಗೆ ತಂದದ್ದು ಮಹಾರಾಜರ ಹೆಗ್ಗಳಿಕೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಂದೆಯವರಾದ ಶ್ರೀ ಹತ್ತನೇ ಚಾಮರಾಜ ಒಡೆಯರು 1840ರಲ್ಲಿ ಮೊಟ್ಟಮೊದಲ ಬಾರಿಗೆ ಹೆಣ್ಣುಮಕ್ಕಳ ಶಾಲೆಯನ್ನು ಬೆಂಗಳೂರಿನಲ್ಲಿ, ಮೈಸೂರು ಪಟ್ಟಣದಲ್ಲಿ ಪ್ರಥಮವಾಗಿ ಮಹಿಳಾ ಶಾಲೆಯನ್ನು 1881ರಂದು ಸ್ಥಾಪಿಸಿ ಜಗನ್ಮೋಹನ ಅರಮನೆಯಲ್ಲಿ ತರಗತಿಗಳು ಆರಂಭಗೊಳ್ಳಲು ಪ್ರೋತ್ಸಾಹ ನೀಡಿದರು. ಮುಂದೆ ಈ ಶಾಲೆ ಮಹಾರಾಣಿಯವರ ಹೆಸರಿನಲ್ಲಿ ಕಾಲೇಜಾಗಿ 1901ರಲ್ಲಿ ನಾಡಿನ ಗಮನ ಸೆಳೆಯಿತು. ತಮ್ಮ ತಂದೆಯ ದೂರದೃಷ್ಟಿತ್ವದ ಹಾಗೆಯೆ, ಅಥವಾ ಅವರಿಗಿಂತಲೂ ಮುಂದಾಲೋಚನೆಯಲ್ಲಿ ಮೇಳೈಸಿದವರು ನಾಲ್ವಡಿ ಕೃಷ್ಣರಾಜ ಒಡೆಯರವರು. ಕನ್ನಡನಾಡಿನಲ್ಲಿ ಶಿಕ್ಷಣದ ಕ್ರಾಂತಿಯನ್ನು ಮಾಡುವ ಮೂಲಕ, ಅಕ್ಷರದೀಪವನ್ನು ಹಚ್ಚುವ ದಿಟ್ಟ ಪ್ರಯತ್ನ ಮಾಡಿದರು. ಈ ಮಾತಿಗೆ ಸಾಕ್ಷೀಪ್ರಜ್ಞೆಯಾಗಿ. ಪ್ರಜಾಪ್ರತಿನಿಧಿ ಸಭೆಯಲ್ಲಿ ಅನುಮೋದನೆಗೊಂಡ ನಿರ್ಣಯಕ್ಕೆ ಜುಲೈ 17, 1916ರಂದು ತಮ್ಮ ಒಪ್ಪಿಗೆಯ ಮುದ್ರೆಯನ್ನು ಒತ್ತುವ ಮುಖಾಂತರ, ಮೈಸೂರು ವಿಶ್ವವಿದ್ಯಾನಿಲಯ ಅಧಿಕೃತವಾಗಿ ಆರಂಭಗೊಳ್ಳಲು ಮುಖ್ಯ ಕಾರಣರಾಗುತ್ತಾರೆ. 1916 ಅಕ್ಟೋಬರ್12ರಂದು ಸೆನೆಟ್ ಸಭೆಯಲ್ಲಿ ನಾಲ್ವಡಿಯವರು ಆಡಿದ ಮಾತುಗಳು : ''ಈ ಉನ್ನತ ವಿದ್ಯಾಲಯವು ರಾಜ್ಯದ ಮೂಲೆಮೂಲೆಗಳಲ್ಲಿ ಅಡಗಿರುವ ಅಜ್ಞಾನ, ಅಂಧಕಾರಗಳನ್ನು ತೊಡೆಯುವ ಜ್ಯೋತಿಯಾಗಬೇಕು. ಈ ವಿಶ್ವವಿದ್ಯಾನಿಲಯವು, ವಿಶ್ವದ ಇತರ ವಿದ್ಯಾಲಯಗಳ ಗೌರವ, ಮಾನ್ಯತೆಗೆ ಪಾತ್ರವಾಗಬೇಕು. ಈ ಮುಖದಲ್ಲಿ ಬೋಧನೆ, ಪರೀಕ್ಷಾ ಮಟ್ಟಗಳು, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಾಗ ಕುಗ್ಗಬಾರದು. ನಮ್ಮ ವಿದ್ಯಾರ್ಥಿಗಳು ಕೇವಲ ಕಲಿತವರಾಗದೆ ಶೀಲವಂತರಾಗಿ, ಸಂಸ್ಕರಣದ ಮುದ್ರೆಯನ್ನು ಹೊತ್ತು ಹೊರಗೆ ಬರಬೇಕು. ಅಷ್ಟೇ ಅಲ್ಲದೆ ಕನ್ನಡ ಭಾಷೆ, ಸಾಹಿತ್ಯಗಳನ್ನು ಬೆಳೆಸುವ ದಿಕ್ಕಿನಲ್ಲಿ ವಿಶೇಷ ಗಮನ ಹರಿಸಬೇಕು'' ಎಂದಿರುವುದು ಮಹಾರಾಜರಲ್ಲಿರುವ ಶಿಕ್ಷಣ ಮತ್ತು ಸಮಾಜದ ಬಗೆಗಿದ್ದ ನಿಜವಾದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕುಲಪತಿಗಳಾಗಿದ್ದಾಗ

ರಾಜಸೇವಾಪ್ರಸಕ್ತ ಎಚ್.ವಿ. ನಂಜುಂಡಯ್ಯ, ಡಾ. ಬಜೇಂದ್ರನಾಥಸೀಲ್, ಡಾ. ಇ.ಪಿ. ಮೆಟಾಕಾಫ್ ಹಾಗೂ ರಾಜಕಾರ್ಯ ಪ್ರವೀಣ ಎನ್.ಎಸ್. ಸುಬ್ಬರಾವ್. ಈ ಮಹನೀಯರುಗಳು ಉಪಕುಲಪತಿಗಳಾಗಿ ಸೇವೆ ಸಲ್ಲಿಸಿ ಮೈಸೂರು ರಾಜ್ಯ ಹಾಗೂ ವಿಶ್ವವಿದ್ಯಾನಿಲಯದ ಘನತೆಯನ್ನು ಹೆಚ್ಚಿಸಿದವರಾಗಿದ್ದಾರೆ.

ನಾಲ್ವಡಿ ಕೃಷ್ಣರಾಜರು ಬಡವರು, ಶೋಷಿತರು, ದೀನದಲಿತರ ಬಗೆಗೆ ಅಪಾರವಾದ ಕನಿಕರ ಇರಿಸಿಕೊಂಡಿದ್ದವರು. ವಿಶೇಷವಾಗಿ ದಲಿತರ ಬದುಕಿನ ಏಳಿಗೆಗಾಗಿ ಶ್ರಮಿಸಿದವರು. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಇನ್ನೂ ಮೊದಲಾದ ಕ್ಷೇತ್ರಗಳಲ್ಲಿ ದಲಿತರಿಗೆ ಸಮಾನ ಸದವಕಾಶ ಸಮಾನ ಆದ್ಯತೆ ಸಿಗಬೇಕೆಂದು ಬಯಸಿದ ಧೀಮಂತರು ನಾಲ್ವಡಿಯವರು. ದಲಿತರ ಮಕ್ಕಳ ಶಿಕ್ಷಣಕ್ಕಾಗಿ ಹತ್ತು ಹಲವು ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಕೈಗೊಂಡರು. ದಲಿತರ ಮಕ್ಕಳಿಗೆ ಶಿಕ್ಷಣವನ್ನು ನೀಡಬೇಕೆಂಬ ಮಹಾದಾಸೆಯಿಂದ ಹಸ್ಕೂರು ಮತ್ತು ನರಸಾಪುರದಲ್ಲಿ ಸರ್ಕಾರಿ ಶಾಲೆಗಳನ್ನು ಆರಂಭಿಸಿದರು. ಮೈಸೂರು, ಆನೇಕಲ್, ಹಾಸನ, ತುಮಕೂರು, ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಅನುದಾನ ರಹಿತ ಶಾಲೆಗಳನ್ನು ತೆರೆದರು. ದಲಿತರ ಬದುಕು ಸ್ವಾಭಿಮಾನದಿಂದ ಕೂಡಿರಬೇಕು. ಇವರು ಸ್ವಾವಲಂಬಿಯಾದ ಹಸನಾದ ಜೀವನ ಸಾಗಿಸಬೇಕೆಂಬ ಬಯಕೆಯಿಂದ ಪುರಸಭೆ, ಜಿಲ್ಲಾಮಂಡಲಿ, ಪ್ರಜಾ ಪ್ರತಿನಿಧಿ ಸಭೆಗಳಿಗೆ, ವಿಶೇಷ ಆದ್ಯತೆ ನೀಡಿ ದಲಿತರಿಗಾಗಿ ಸಮುದಾಯದವರು ಸಮಾಜ–ಸರ್ಕಾರದ ಮುಖ್ಯವಾಹಿನಿಗೆ ಬರುವಂತೆ ಮಾಡಲು ಶ್ರಮಿಸಿದರು. ವಿಶೇಷವಾಗಿ ದಲಿತರಾಗಿ ವಿದ್ಯೆ–ಉದ್ಯೋಗಕ್ಕೆ ನಾಲ್ವಡಿಯವರು ನೀಡಿದ ಕೊಡುಗೆಯಂತೂ ಅತಿ ಸ್ಮರಣೀಯ. ಭವ್ಯವಾಗಿ ತಲೆಎತ್ತಿ ನಿಂತಿದ್ದ ಅರಮನೆಗೆ ದಲಿತರಿಗೆ ಎಂದಿಗೂ ಪ್ರವೇಶವಿರಲಿಲ್ಲ. 1936ನೆಯ ಇಸವಿಯಲ್ಲಿ ದಲಿತ ಸಮುದಾಯದವರು ಅರಮನೆಯ ಒಳಗೆ ಮುಕ್ತವಾಗಿ ಪ್ರವೇಶಿಸಲು ಅವಕಾಶ ಕಲ್ಪಿಸಿಕೊಟ್ಟದ್ದು ನಾಲ್ವಡಿ ರಾಜರಲ್ಲಿದ್ದ ದಲಿತಪರ ಕಾಳಜಿಯನ್ನು ಸೂಚಿಸುತ್ತದೆ. ಲಂಬಾಣಿ, ಬುಡಕಟ್ಟು, ಅರಣ್ಯನಿವಾಸಿಗಳ ಮಕ್ಕಳ ಶಿಕ್ಷಣಕ್ಕಾಗಿ ನಾಲ್ವಡಿಯವರು ಒತ್ತು ನೀಡಿದುದು ಅವರಲ್ಲಿದ್ದ ಸಮಾಜಮುಖಿ ಪ್ರಗತಿಗೆ ಸಾಕ್ಷಿಯಾಗಿದೆ. ರಾಜ್ಯದಲ್ಲಿ 32 ಲಂಬಾಣಿ ಶಾಲೆಗಳನ್ನು, ಬಿಳಿಗಿರಿ ರಂಗನಬೆಟ್ಟದಲ್ಲಿ 4 ಗಿರಿಜನ (ಸೋಲಿಗರು) ಮಕ್ಕಳಿಗಾಗಿ ಶಾಲೆಗಳನ್ನು ಹಾಗೂ ಕೋಲಾರ ಜಿಲ್ಲೆಯಲ್ಲಿ ಬೋವಿಜನಾಂಗಕ್ಕಾಗಿ 3 ಸ್ಕೂಲುಗಳನ್ನು ತೆರೆಯುವ ಮೂಲಕ ಬಡವರ, ದಲಿತರ, ಶಿಕ್ಷಣ ವಂಚಿತ ಜನಾಂಗದವರ ಮಕ್ಕಳು ವಿದ್ಯೆ–ವಿವೇಕವನ್ನು ಪಡೆಯಲು ಅನುವು ಮಾಡಿಕೊಡುವ ಮೂಲಕ ನಾಲ್ವಡಿ ಕೃಷ್ಣರಾಜರು ಬಡವರ ಬದುಕಿಗೆ ಬೆಳಕು ನೀಡಿದವರಾದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ನಾಡಿಗೆ ನೀಡಿರುವ ಅನನ್ಯ ಕೊಡುಗೆಯನ್ನು ಚಿರಸ್ಥಾಯಿಗೊಳಿಸಲು, ಅವರ ಹೆಸರು ಜನಹೃದಯದಲ್ಲಿರುವಂತೆ ಮಾಡಲು ಕನ್ನಡದ ಅನೇಕ ಬರಹಗಾರರು ಮಹಾರಾಜರ ಸಾಧನೆಯನ್ನು ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಬಿ.ಎಂ.ಶ್ರೀ – "**ರಾಜಭಕ್ತಿಮುಕ್ತಾವಳಿ**" (1928), ಆರ್.ಎಸ್.ನಾರಾಯಣ–"**ಪ್ರಭುವರ್ಯರ ಯುರೋಪ್ ಪ್ರವಾಸ**", ಎಂ.ಸಿಂಗ್ರಯ್ಯ– "**ಮೈಸೂರನ್ನು ಆಳಿದ ಮಹಾಸ್ವಾಮಿಯವರಾದ ನಾಲ್ವಡಿ**

**ಕೃಷ್ಣರಾಜ ಒಡೆಯರ್**" (1936), ಶ್ರೀನಾಥ – "**ನಾಲ್ವಡಿ ಕೃಷ್ಣರಾಜನ ಮೈಸೂರು**" (1931), ಡಿ.ಆರ್.ಚನ್ನೇಗೌಡ – "**ನಮ್ಮ ಮಹಾರಾಜರು**" (1939), ಶ್ರೀ ಸಿ.ಕೆ.ವೆಂಕಟರಾಮಯ್ಯ–"**ಅಳಿದ ಮಹಾಸ್ವಾಮಿಯವರು**" (1941) ಇನ್ನೂ ಮುಂತಾದ ಕೃತಿಗಳನ್ನು ಸಹ ಉದಾಹರಿಸಬಹುದಾಗಿದೆ.

## ಆಕರ ಗ್ರಂಥಗಳು

1 **ನಾಲ್ವಡಿ ಕೃಷ್ಣರಾಜ ಒಡೆಯರ್ ಒಂದು ದರ್ಶನ** : ಸಂಪಾದಕರು ಡಾ. ಪಿ.ವಿ. ನಂಜರಾಜ ಅರಸ್, ಪ್ರೊ. ಎಸ್.ಆರ್. ಚಂದ್ರರಾಜ ಅರಸ್ ; ಪ್ರಕಾಶಕರು : ಅಖಿಲ ಕರ್ನಾಟಕ ಅರಸು ಪರಿಷತ್ತು (ರಿ.), ಮೈಸೂರು, ಪ್ರಥಮ ಮುದ್ರಣ – 1996.

2 **ದೇವರಾಜ ಅರಸು : ಒಂದು ಅವಲೋಕನ** : ಸಂಪಾದಕರು ಶೂದ್ರ ಶ್ರೀನಿವಾಸ್ ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮುದ್ರಣ – 2006.